ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. **631/15**

| | | |
|---|---|---|
| ಸಾಕ್ಷಿದಾರರು ಹೆಸರು | : ಲೋಹಿತ್ ಪಾಟೀಲ್ | ದಿನಾಂಕಃ **05.02.2020** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಕೆ. ಎಂ. ಪಾಟೀಲ್ | |
| ವಯಸ್ಸು | : **36** ವರ್ಷ | |
| ಉದ್ಯೋಗ | : ಸ್ಕೂಲಿನಲ್ಲಿ ಡೈರೆಕ್ಟರ್ | **CW-1** |
| ವಾಸಸ್ಥಳ | : ಬೆಂಗಳೂರು | **PW-1** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಆರೋಪಿಗಳು ಪರಿಚಯ ಇರುತ್ತಾರೆ. ದಿನಾಂಕಃ 17.11.2008 ರಂದು ನಾನು ಆರೋಪಿ ಗಳೊಂದಿಗೆ ಗ್ರಾನೈಟ್ ಮೈನಿಂಗ್ ಸಂಬಂಧವಾಗಿ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದೆ. ಅದು ಕೊತ್ತಲವಾಡಿ ಗಾರಮದ ಸರ್ವೆನಂಬರ್ 208 ರ ಜಮೀನ ವಿಸ್ತೀರ್ಣ 4 ಎಕರೆ 20 ಗುಂಟೆ ಗೆ ಸಂಬಧಿಸಿದ್ದು ಆಗಿರುತ್ತದೆ. 2008 ರಿಂದ 2012 ರವರೆಗೆ ನಾನು ಆ ಜಮೀನಿನಲ್ಲಿ ಡೆವಲಪ್ ಮೆಂಟ್ ಕಾರ್ಯವನ್ನು ಮಾಡುತ್ತಿದ್ದು, ಜಮೀನಿನಲ್ಲಿ ಗ್ರಾನೈಟ್ ಕಂಡು ಬಂತು, ಹಾಗಾಗಿ ಆರೋಪಿಗಳು ನನ್ನಿಂದ 20 ಲಕ್ಷ ಹೆಚ್ಚಿನ ಹಣವನ್ನು ಬೇಡಿಕೆ ಮಾಡಿದರು. ನಾನು ಅಗ್ರಿಮೆಂಟ್ ಸಮಯದಲ್ಲಿ ಅವರುಗಳಿಗೆ 12 ಲಕ್ಷ ಕೊಟ್ಟಿದ್ದೆ. ಸದರಿ ಅಗ್ರಿಮೆಂಟ್ ನಲ್ಲಿ ಕಾಣಿಸಿರುವಂತೆ ಗ್ರಾನೈಟ್ ಗೆ ಲೈಸೆನ್ಸ್ ಸಿಕ್ಕಿದ ಹತ್ತು ವರುಷಗಳ ಕಾಲ ಎಂದು ಕಾಣಿಸಿದ್ದೆವು. ಅ ಲೈಸೆನ್ಸ್‌ನ್ನು ಆರೋಪಿಗಳು ಮಾಡಿಸಿಕೊಡುವಂತೆ ಅಗ್ರಿಮೆಂಟ್ ನಲ್ಲಿ ಇತ್ತು. ಆರೋಪಿ ಗಳು ನಲ್ಲಿ 208 ರ ಮಾಲೀಕರಾಗಿರುತ್ತಾರೆ. ನಾನು 20 ಲಕ್ಷ ಕೊಡಲು ಆಗುವುದಿಲ್ಲಾ ಎಂದು ಹೇಳಿದಾಗ ಆರೋಪಿಗಳು ಯೋಗೇಶ್ ಎಂಬ ವ್ಯಕ್ತಿಯೊಂದಿಗೆ ಸೇರಿಕೊಂಡು ಮತ್ತೊಂದು ಸುಳ್ಳು ಅಗ್ರಿಮೆಂಟ್ ಮಾಡಿಕೊಟ್ಟಿರುತ್ತಾರೆ. ಅ ರೀತಿ ಅಗ್ರಿಮೆಂಟನ್ನು ಪ್ರಿ ಡೇಟ್ ಹಾಕಿ ಮಾಡಿಕೊಟ್ಟಿರುತ್ತಾರೆ.

ಆರೋಪಿಗಳು ದಿನಾಂಕಃ 06.02.2013 ರಲ್ಲಿ ನನಗೇ ಒಂದು ನೊಟೀಸನ್ನು ಕಳುಹಿಸಿ ಅದರಲ್ಲಿ ತಿಳಿಸಿರುವಂತೆ ಈ ಮೊದಲು ನಾನು ನೀಡಿದ 12 ಲಕ್ಷ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇನೆ ಎಂದು ಹೇಳಿದ್ದರು. ಆ ಬಗ್ಗೆ ನಾನು ಪ್ರತ್ಯುತ್ತರ ನೊಟೀಸ್ನ್ನು ದಿನಾಂಕಃ 12.02.2013 ರಂದು ನೀಡಿದ್ದೆ. ಅನಂತರ ದಲ್ಲಿ ಆರೋಪಿ ಗಳು ಜಮೀನಿನಲ್ಲಿ ನಾನು ಶೋಧಿಸಿದ ಗ್ರಾನೈಟನ್ನು ಯೋಗೇಶ್ ಎಂಬುವವರ ಮೂಲಕ ಬೇರೆಯವರಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದರು. ನಾನು ಈ ಬಗ್ಗೆ ದಿನಾಂಕಃ 24.08.2013 ರಂದು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ ದೂರಿನ ದಾಖಲೆಯನ್ನು

ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದಾಖಲೆಯನ್ನು ನಿಪಿಃ 1 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ 1(ಎ) ರಿಂದ (ಡಿ) ಎಂದು ಗುರುತಿಸಲಾಯಿತು. ಆರೋಪಿಗಳು ನನ್ನೊಂದಿಗೆ ಮಾಡಿಕೊಂಡ ಅಗ್ರಿಮೆಂಟ್ ನ್ನು ಉಲ್ಲಂಘನೆ ಹಾಗೂ ವಂಚನೆ ಸಂಬಂಧವಾಗಿ ದೂರನ್ನು ನೀಡಿರುತ್ತೇನೆ. ಪೊಲೀಸಿನವರು ಅನಂತರ ಬಂದು ಆ ಬಗ್ಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಗೆ ಈಗ ಪಂಚನಾಮೆ ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದಾಖಲೆಯನ್ನು ನಿಪಿಃ 2 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ನಾನು ದೂರು ನೀಡುವಾಗ ಯೋಗೇಶ್ ಕುಮಾರ್ ರವರು ಜಮೀನಿಗೆ ಅತಿಕ್ರಮವಾಗಿ ಪ್ರವೇಶ ಮಾಡಿರುವ ಬಗ್ಗೆ ತಿಳಿಸಿರುತ್ತೇನೆ. ನಾನು ಅನಂತರ ಪೊಲೀಸರಿಗೆ ಅತಿಕ್ರಮ ಪ್ರವೇಶ ಕುರಿತು ಮರು ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಪೊಲೀಸರಿಗೆ ಯೋಗೇಶ್ ಕುಮಾರ್ ಎಂಬುವವರು ಅತಿಕ್ರಮ ಪ್ರವೇಶ ಮಾಡಿಲ್ಲಾ ಎಂದು ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಈಗ ಕಡತದಲ್ಲಿರುವ ದಿನಾಂಕಃ 17.11.2008 ರ ಒಪ್ಪಂದ ಕರಾರಿ ಒಂದು ನೋಟರೈಸಡ್ ದಾಖಲೆಯನ್ನು ನೋಡಿ ಗುರುತಿಸಿದ್ದು ಅದು ನನ್ನ ಮತ್ತು ಆರೋಪಿಗಳ ನಡುವೆ ಅದಂತಹ ಕರಾರು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 3 ಎಂದು ಗುರುತಿಸಲಾಯಿತು. ಆರೋಪಿ 2 ಮತ್ತು 4 ರವರುಗಳು ಹಾಜರಿದ್ದು ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರುಹಾಜರಾಗಿದ್ದು, ಆ ಸಂಬಂಧ ಅರ್ಜಿಯನ್ನು ಸಲ್ಲಿಸಿದ್ದು ಅವರ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ. 3 ನೇ ಆರೋಪಿ ತೀರಿಕೊಂಡಿರುತ್ತಾರೆ. ಯೋಗೇಶ್ ಎಂಬುವವರು ಸದರಿ ಜಮೀನಿನಲ್ಲಿ ಕೆಲಸ ಮಾಡಿಸುತ್ತಿದ್ದರು. ಅವರನ್ನು ನಾನು ನೋಡಿರುವುದಿಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲು ಮಾಡಲು ಕಾಲಾವಕಾಶ ಕೋರಲಾಗಿ ನೀಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.